ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಜೋಗ್ ವೃತ್ತದವರು ಲೈನ್ ಮಿನಿಮಂ ವಸೂಲಿ ಮಾಡುತ್ತಿರುವುದು

೧೦೯೧. ಶ್ರೀ ಬಿ. ಧರ್ಮಪ್ಪ (ಸಾಗರ).— ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಾಗರ ತಾಲ್ಲೂಕು ಕಾರ್ಗಲ ಜೋಗ್ ಅಧಿಸೂಚಿತ ಪ್ರದೇಶದ ವ್ಯಾಪ್ತಿಗೆ ಸೇರಿದ ಲಿಂಗನಮಕ್ಕಿ ಗ್ರಾಮದ ಹೆಡ್ಡೂಳ್ಳಿಗೆ ವಿದ್ಯುತ್ ಸರಬರಾಜು ಮಾಡಿರುವ ಜೋಗ್ ವೃತ್ತದ ವಿದ್ಯುಚ್ಛಕ್ತಿ ಮಂಡಳಿಯವರು ಲೈನ್ ಮಿನಿಮಂ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಜೋಗ್ ವೃತ್ತದ, ಅಧಿಕಾರಿಗಳು, ಸಾರ್ವಜನಿಕರು ವಿದ್ಯುತ್ ಕೋರಿ ಅರ್ಜಿ ಸಲ್ಲಿಸಿದರೆ ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ ಮತ್ತು ಕಾನೂನುಗಳನ್ನು ಕಡೆಗಣಿಸಿ ಅಧಿಸೂಚಿತ ಪ್ರದೇಶ ಸಮಿತಿಯ ನಿರಾಕ್ಷೇಪಣಾ ಪತ್ರವನ್ನು ಕಡೆಗಣಿಸಿ ವಿದ್ಯುತ್ ಸರಬರಾಜನ್ನು ತಿರಸ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಈ ತೊಂದರೆಯನ್ನು ಸರಿಪಡಿಸಲು ಕೈಗೊಂಡ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಆ) ಹೆಡ್ಡೂಳ್ಳಿ ಗ್ರಾಮಕ್ಕೆ ಸೇರಿದ ೩ ನೀರಾವರಿ ಪಂಪುಸೆಟ್ಟುಗಳಿಗೆ ಮೊದಲು ವಿದ್ಯುತ್ ಒದಗಿಸಲಾಗಿತ್ತು. ಈ ಗ್ರಾಮಂ ವಿದ್ಯುದ್ದೀಕರಣವಾಗಿರಲಿಲ್ಲ ನಂತರ ಗೃಹ ಬಳಕೆ ವಿದ್ಯುತ್ತಿಗಾಗಿ ಅರ್ಜಿಗಳು ಒಂದಿದ್ದು ಇದಕ್ಕೆ ವಿದ್ಯುತ್ ಸರಬರಾಜು ಮಾಡಲಾಯಿತು. ಹೀಗಾಗಿ ಈ ಮೂರು ಗ್ರಾಹಕರಿಂದ ಲೈನ್ ಮಿನಿಮಂ ವಸೂಲು ಮಾಡಲಾಯಿತು.

ಅ) ಭಾರತ ಸರ್ಕಾರವು 'ವೈಟಲ್' ಇನ್ ಸ್ಟಾಲೇಷನ್‌ಗಳಿರುವ ಪ್ರದೇಶವನ್ನು ರಕ್ಷಣಾ ದೃಷ್ಟಿಯಿಂದ ನಿಷೇದಿತ ಪ್ರದೇಶವೆಂದು ಘೋಷಿಸಿದೆ. ಆದ್ದರಿಂದ ವಿದ್ಯುತ್ ಸರಬರಾಜು ಬೇಡಿದ ೧೬೫ ಮಂದಿಗೆ ಅವರು ಈ ಪ್ರದೇಶದಲ್ಲಿ ಅನಧಿಕೃತ ನಿವಾಸಿಗಳಾಗಿದ್ದರೂ ಪ್ರತ್ಯೇಕ ಕರಾರು ಪತ್ರ ಪಡೆದು ಅವರುಗಳಿಗೆಲ್ಲಾ ವಿದ್ಯುತ್ ಸರಬರಾಜು ಮಾಡಲಾಗಿದೆ. ನಿಷೇದಿತ ಪ್ರದೇಶಗಳ ಹೊರಗಡೆ ಇರುವವರಿಗೆ ವಿದ್ಯುತ್ ಸರಬರಾಜು ಮಾಡುವಲ್ಲಿ ಯಾವ ಅಭ್ಯಂತರವೂ ಇಲ್ಲ.

ಶ್ರೀ ಬಿ. ಧರ್ಮಪ್ಪ.— ಮಾನ್ಯ ಸಭಾಪತಿಯವರೇ ಸಾಗರ್ ತಾಲ್ಲೂಕಿನ ಜೋಗ್ ಮತ್ತು ಕಾರ್ಗಲ್ ಅಧಿಸೂಚಿತ ಪ್ರದೇಶದವಾಗಿರುತ್ತದೆ. ಆ ಏರಿಯಾಕ್ಕೆ ಒಳಪಟ್ಟಂತೆ ೮-೧೦ ಹಳ್ಳಿಗಳು ಬರುತ್ತವೆ. ಅವುಗಳನ್ನೂ ಕೂಡ ಅಧಿಸೂಚಿತ ಪ್ರದೇಶಗಳೆಂದು ಹೇಳಿ ಯಾವ ಸೌಲಭ್ಯಗಳನ್ನು ಕೊಟ್ಟಿಲ್ಲ. ವಿದ್ಯುತ್ ಸೌಲಭ್ಯವನ್ನೂ ಕೂಡ ಕೊಟ್ಟಿಲ್ಲ. ವಿದ್ಯುತ್ ಸೌಲಭ್ಯವನ್ನು ಪಡೆಯಬೇಕೆಂದರೆ ಅನುಮತಿ ಪಡೆಯಬೇಕೆಂದು ಹೇಳುತ್ತಾರೆ ಬಸ್ ಸೌಕರ್ಯವೂ ಅಲ್ಲಿಗೆ ಇಲ್ಲ, ಆಸ್ಪತ್ರೆ ಸೌಕರ್ಯವೂ ಕೂಡ ಇಲ್ಲ. ಇವುಗಳಿಗೆ ಅರ್ಜಿಗಳನ್ನು ಬರೆದು ಕಳುಹಿಸಿದರೆ ತಿರಸ್ಕಾರ ಮಾಡುತ್ತಿರುತ್ತಾರೆ. ಕೊನೆ ಪಕ್ಷ ಅಲ್ಲಿ ಜಮೀನು ಮತ್ತು ಮನೆಗಳನ್ನು ಮಾಡಿಕೊಂಡು ವಾಸವಾಗಿರುವ ಜನರಿಗೆ ವಿದ್ಯುಚ್ಛಕ್ತಿ ಆಸ್ಪತ್ರೆ ಬಸ್ ಇವೆಲ್ಲ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ವಿದ್ಯುತ್ ಲೈನ್ ಮಿನಿಮಮ್ ಎಂದು ಎರಡು ಮೂರು ಜನರಿಗೆ ಮಾತ್ರ ಒದಗಿಸಿಕೊಟ್ಟು ಬೇರೆ ಯಾರಿಗೂ ಕೊಟ್ಟಿಲ್ಲ. ಈ ಲೈನ್ ಮಿನಿಮಮ್ ತೆಗೆಯಬೇಕು. ನೋಟಿಫೈಡ್ ಏರಿಯಾದಲ್ಲಿ ಇರುವವರೆಲ್ಲರಿಗೂ ವಿದ್ಯುಚ್ಛಕ್ತಿ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಮಂಡಲಿಯ ನಿಯಮಾನುಸಾರ ವಿದ್ಯುತ್ ಸರಬರಾಜು ಮಾಡಿರುತ್ತಾರೆ. ಲೈನ್ ಮಿನಿಮಂ ವಸೂಲ್ಮಾಡಕ್ಕೆ ಸಂದರ್ಭ ಯಾವಾಗ ಬರುತ್ತದೆಂದರೆ ಹಳ್ಳಿ ಎಲೆಕ್ಟ್ರಿಫಿಕೇಷನ್ ಆಗಿಲ್ಲದಿದ್ದರೆ ಲೈನ್‌ಮಿನಿಮಂ ಕಟ್ಟಬೇಕಾಗುತ್ತದೆ, ಅಂಥ ಸಂದರ್ಭದಲ್ಲಿ ವಿದ್ಯುತ್ ಬೇಕೆಂದು ಕೇಳಿದಾಗ ಲೈನ್ ಮಿನಿಮಮ್ ಕಟ್ಟುತ್ತೇವೆಂದು ಗ್ರಾಮಸ್ಥರು ಬರೆದು ಕೊಡುತ್ತಾರೆ. ಅದನ್ನು ಡಿಪಾಸಿಟ್ ಮಾಡಿದ ಮೇಲೆ ಪವರ್ ಸಪ್ಲೈ ಮಾಡುತ್ತಾರೆ. ಪವರ್ ತೆಗೆದುಕೊಂಡ ಮೇಲೆ

ಇಷ್ಟೊಂದು ದುಡ್ಡನ್ನು ಏಕೆ ಕೊಡಬೇಕೆಂದು ವಿಚಾರ ಮಾಡಿ ಅದನ್ನು ವಜಾ ಮಾಡಿ ಎಂದು ಕೇಳುತ್ತಾರೆ. ಮಂಡಲಿಯ ನಿಯಮಾನುಸಾರ ೭ ವರ್ಷದ ಮೇಲೆ ಆಗಿದ್ದರೆ ವಜಾ ಮಾಡುವುದಕ್ಕೆ ಬರುತ್ತದೆ ಆ ರೀತಿ ಏನಾದರೂ ನಿಯಮಾನುಸಾರ ವಜಾ ಮಾಡುವುದಕ್ಕೆ ಪ್ರಾವಿಷನ್ ಇದ್ದರೆ ಮಾನ್ಯ ಸದಸ್ಯರು ಹೇಳಿದ್ದನ್ನು ವಜಾ ಮಾಡಿಸಬಹುದು. ಅಂದರೆ ಹಳ್ಳಿ ಎಲೆಕ್ಟ್ರಿಫೈ ಆಗಿದ್ದರೆ ಅಂಥ ಸಂದರ್ಭದಲ್ಲಿ ವಜಾ ಮಾಡಬಹುದು ಅನಧಿಕೃತವಾಗಿ ಕಟ್ಟಿದ ೧೬೫ ಮನೆಗಳಿಗೆ ಈಗಾಗಲೇ ಸ್ಪೆಷಲ್ ಪ್ರಾವಿಷನ್ ಮಾಡಿ ಸರ್ವೀಸ್ ಕೊಡಲಾಗಿದೆ. ಅದೇ ರೀತಿ ಅಗ್ರಿಮೆಂಟ್ ಮಾಡಿಕೊಂಡು ಉಳಿದ ಮನೆಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಬಿ. ಧರ್ಮಪ್ಪ.— ಈ ವಿಚಾರವನ್ನು ನಾನು ನೂರು ಸಾರಿ ಮೌಲಿನರ ಗಮನಕ್ಕೆ ತಂದಿದ್ದೇನೆ. ಆದರೂ ಆಗಿಲ್ಲ. ಆದಷ್ಟು ಶೀಘ್ರವಾಗಿ ಸಂಬಂಧಪಟ್ಟವರಿಗೆ ಹೇಳಿ ಮಾಡಿಸಿ ಕೊಡುತ್ತೇನೆಂದು ಸ್ಪಷ್ಟಪಡಿಸಿದರೆ ಸಾಕು.

ಶ್ರೀ ಲಕ್ಷ್ಮೀನರಸಿಂಹಯ್ಯ.— ೧೬೫ ಮನೆಗಳಿಗೆ ಯಾವ ಆಧಾರದ ಮೇಲೆ ಕೊಡಲಾಗಿದೆಯೋ ಅದೇ ಆಧಾರದ ಮೇಲೆ ಮಿಕ್ಕ ಮನೆಗಳಿಗೂ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಗುಲ್ಬರ್ಗಾ ಜಿಲ್ಲೆಯಲ್ಲಿನ ಖಾಸಗೀ ಸಿಮೆಂಟ್ ಕಾರ್ಖಾನೆಗಳು

೧೦೮೯. ಶ್ರೀ ಡಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಗಣಿ ಹಾಗೂ ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಖಾಸಗಿ ಸಿಮೆಂಟ್ ತಯಾರಿಸುವ ಕಾರ್ಖಾನೆಗಳ ಸಂಖ್ಯೆ ಎಷ್ಟು ?

(ಆ) ಅವುಗಳಿಗೆ ಯಾವ ಮೂಲದಿಂದ ಕಚ್ಚಾ ವಸ್ತು ಸರಬರಾಜು ಆಗುತ್ತಿದೆ ಹಾಗೂ ಅವುಗಳ ದಿನನಿತ್ಯದ ಪ್ರಮಾಣವೆಷ್ಟು ?

(ಇ) ಸರಬರಾಜು ಮಾಡುವ ವ್ಯಕ್ತಿ ಹಾಗೂ ಸಂಸ್ಥೆಗಳ ಹೆಸರುಗಳ ವಿವರಗಳನ್ನು ಒದಗಿಸುವುದು.

(ಈ) ಈ ಮೂಲಗಳಿಂದ ಸರ್ಕಾರಕ್ಕೆ ಪ್ರತಿವರ್ಷ ಬರುವ ರಾಜಧನವೆಷ್ಟು ?

(೧೯೮೭ರಿಂದ ೧೯೮೮ರ ವರೆವಿಗೆ ವಿವರ ಒದಗಿಸುವುದು)

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು).—

(ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು ೧೮ ಖಾಸಗಿ ಸಿಮೆಂಟ್ ಕಾರ್ಖಾನೆಗಳಿವೆ. ಅದರಲ್ಲಿ ೪ ಮುಖ್ಯ ಸಿಮೆಂಟ್ ತಯಾರಿಕಾ ಘಟಕವಾಗಿದ್ದು ಇವುಗಳ ಉತ್ಪಾದನಾ ಸಾಮರ್ಥ್ಯ ಪ್ರತಿದಿನ ೧೫೦೦ ರಿಂದ ೫೮೦೦ ಟನ್‌ಗಳಷ್ಟಿರುತ್ತದೆ. ಉಳಿದವು ಸಣ್ಣ ಪ್ರಮಾಣದ ಘಟಕವಾಗಿದ್ದು ಇವುಗಳ ಉತ್ಪಾದನಾ ಸಾಮರ್ಥ್ಯ ಪ್ರತಿದಿನ ೨೦–೫೦೦ ಟನ್‌ಗಳಷ್ಟಾಗಿರುತ್ತದೆ.

(ಆ) ಮುಖ್ಯ ಮೂಲ ವಸ್ತುವಾದ ಸುಣ್ಣದ ಕಲ್ಲು ಕಾರ್ಖಾನೆಗಳ ಸಮೀಪದಲ್ಲಿಯೇ ಇರುವ ಸ್ವಂತ ಗಣಿಗಳಿಂದ ಸರಬರಾಜು ಆಗುತ್ತದೆ. ಹಾಗೇ ಸ್ವಂತ ಗಣಿಗಳು ಇಲ್ಲದಿರುವ ಘಟಕಗಳು ಬೇರೆ ಗುತ್ತಿಗೆ ಹೊಂದಿರುವ ಗಣಿಗಳಿಂದ ಪಡೆಯುತ್ತಾರೆ. ಪ್ರತಿ ದಿನ ಬೇಕಾಗುವ ಸುಣ್ಣಕಲ್ಲಿನ ಪ್ರಮಾಣ ಸುಮಾರು ೧೫,೦೦೦ ಟನ್.

(ಇ)

೧ ಮೆ॥ ವಾಡಿ ಸ್ಟೋನ್ ಮಾರ್ಕೆಟಿಂಗ್ ಕಂ, ವಾಡಿ
೨ ಮೆ॥ ಬಂದೇಕಾರ್ ಮೈನ್ಸ್, ಚಿತ್ತಾಪುರ
೩ ಶಿವಪ್ಪಾ ಸೋಮನಾಥನಹಳ್ಳಿ
೪ ಮೆ॥ ಚಿತ್ತಾಪುರ ಸ್ಟೋನ್ ಚಿತ್ತಾಪುರ ಮತ್ತು
೫ ಶಕುಂತಲಾ ಸಿಮೆಂಟ್ ಕಂ. ಚಿತ್ತಾಪುರ